**P.G.R. SINDHIA, B.E. (Civil)**
STATE CHIEF COMMISSIONER
Former Minister for Health, Finance,
Home, Industries & Transport
Government of Karnataka

State Headquarters
No. 39, "Shanthigruha"
Palace Road
Bengaluru-560 001

# ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
## THE BHARAT SCOUTS & GUIDES, KARNATAKA

Ref : BSG/SHQ/ 198/2026-27 | Date : 08-05-2026

ಮಾನ್ಯರೆ,

ವಿಷಯ:- ಶ್ರೀ ಶಿವಕುಮಾರ್ ರಂಗ ಪ್ರಯೋಗ ಶಾಲೆಯಲ್ಲಿ ನಡೆಯುವ ರಂಗ ತರಬೇತಿ ಶಿಬಿರಕ್ಕೆ ತಮ್ಮ ಜಿಲ್ಲೆಯ ರೋವರ್ಸ್, ರೇಂಜರ್ಸ್ ಮತ್ತು ದಳನಾಯಕರುಗಳನ್ನು ನಿಯೋಜಿಸುವಂತೆ ಕೋರಿ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಶಿವಕುಮಾರ್ ರಂಗ ಪ್ರಯೋಗ ಶಾಲೆಯ ವತಿಯಿಂದ ದಿನಾಂಕ:17.05.2026 ರಿಂದ 05.06.2026 ರವರೆಗೆ ಶ್ರೀ ಶಿವಕುಮಾರ್ ರಂಗ ಪ್ರಯೋಗ ಶಾಲೆ, ಸಾಣೆಹಳ್ಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇಲ್ಲಿ ಯುವ ಜನ ಶೈಕ್ಷಣಿಕ ರಂಗ ಶಿಬಿರ ಹೊಸ ತಲೆಮಾರಿಗೆ 20 ದಿನಗಳ ವಸತಿ ಸಹಿತ ರಂಗ ಶಿಕ್ಷಣವನ್ನು ಆಯೋಜಿಸಿರುತ್ತಾರೆ.

ಈ ತರಬೇತಿ ಶಿಬಿರದಲ್ಲಿ **ನಟನೆ, ಸಂವಹನ ಕೌಶಲ್ಯ, ರಂಗ ವಿನ್ಯಾಸದ ಪ್ರಾಯೋಗಿಕ ಜ್ಞಾನ, ವ್ಯಕ್ತಿತ್ವ ವಿಕಸನ ಮತ್ತು ಸಾಮಾಜಿಕ ತಿಳುವಳಿಕೆ** ಈ ವಿಷಯಗಳಿಗೆ ನುರಿತ ಅಧ್ಯಾಪಕರು ಮತ್ತು ಖ್ಯಾತ ನಿರ್ದೇಶಕರುಗಳಿಂದ ನಾಟಕ ತರಬೇತಿಯನ್ನು ನೀಡುತ್ತಾರೆ.

ಪ್ರಾಂಶುಪಾಲರು, ಶ್ರೀ ಶಿವಕುಮಾರ್ ರಂಗ ಪ್ರಯೋಗ ಶಾಲೆ, ಸಾಣೆಹಳ್ಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ 18 ರಿಂದ 32 ವಯೋಮಿತಿಯ ರೋವರ್ಸ್, ರೇಂಜರ್ಸ್ ಮತ್ತು ದಳನಾಯಕರುಗಳನ್ನು ಸದರಿ ತರಬೇತಿ ಶಿಬಿರಕ್ಕೆ ನಿಯೋಜಿಸುವಂತೆ ಕೋರಿದ್ದು, ತಮ್ಮ ಜಿಲ್ಲೆಯ ಆಸಕ್ತ 18 ರಿಂದ 32 ವರ್ಷದೊಳಗಿನ ಕನಿಷ್ಠ ಎಸ್.ಎಸ್.ಎಲ್.ಸಿ ಅಥವಾ ಪಿ.ಯು.ಸಿ ವಿದ್ಯಾರ್ಹತೆ ಪಡೆದ ರೋವರ್ಸ್, ರೇಂಜರ್ಸ್, ದಳನಾಯಕರುಗಳು ಹಾಗೂ ಇತರರನ್ನು ನಿಯೋಜಿಸಬೇಕಾಗಿ ಕೋರಿದೆ.

ನಿಯೋಜಿಸಲ್ಪಟ್ಟವರು ಮೇಲ್ಕಂಡ ತರಬೇತಿ ಶಿಬಿರದಲ್ಲಿ ಭಾಗವಹಿಸಲು ಈ ಕೆಳಗೆ ನೀಡಿರುವ ವೆಬ್‌ಸೈಟ್ ಲಿಂಕ್‌ನಲ್ಲಿ ಆನ್‌ಲೈನ್ ಅರ್ಜಿಗಳನ್ನು ಪಡೆದು, ಭರ್ತಿ ಮಾಡಿ ಈ ಕೆಳಕಂಡ ದೂರವಾಣಿ ಸಂಖ್ಯೆಗೆ ದಿನಂಕ:15.05.2026ರ ಒಳಗಾಗಿ ವಾಟ್ಸಾಪ್ ಮೂಲಕ ಕಳುಹಿಸುವುದು. ಭಾಗವಹಿಸುವವರು ತಲಾ ರೂ.300/- ಅನ್ನು ನೊಂದಾವಣಿ ಶುಲ್ಕವಾಗಿ ಪಾವತಿಸಬೇಕು ಹಾಗೂ ತಮಗೆ ಅಗತ್ಯವಿರುವ ಲಘು ಹಾಸಿಗೆ ಮತ್ತು ಇತ್ಯಾದಿ ಅವಶ್ಯಕ ವಸ್ತುಗಳನ್ನು ತೆಗೆದುಕೊಂಡು ಹೋಗಬೇಕು.

ವೆಬ್‌ಸೈಟ್ ಲಿಂಕ್ :- https://theatreschoolsanehalli.in
ದೂರವಾಣಿ ಸಂಖ್ಯೆ :- 9880872740, 9448398144, 9480282791

.................2

Ph. (Off) : 080-22343400, 22267470
Res.: 080-26582711, 26586725 | info@bsgkarnataka.org
www.bsgkarnataka.org | Mob : 09845371958
pgrsindhia@gmail.com

ಯಾವುದೇ ಆಸಕ್ತರನ್ನು ನಿಯೋಜಿಸಿ ಈ ತರಬೇತಿಯ ಸದುಪಯೋಗವನ್ನು ಪಡೆದುಕೊಳ್ಳುವಂತೆ ತಿಳಿಸಲು ಕೋರಲಾಗಿದೆ. ತಮ್ಮ ಜಿಲ್ಲೆಯಿಂದ ನಿಯೋಜಿಸಲ್ಪಟ್ಟ ಅಭ್ಯರ್ಥಿಗಳ ಪಟ್ಟಿಯನ್ನು ದಿನಾಂಕ:15.05.2026ರ ಒಳಗಾಗಿ ರಾಜ್ಯ ಸಂಘಟನಾ ಆಯುಕ್ತರು(ಸ್ಕೌಟ್ಸ್/ಗೈಡ್ಸ್) ರವರುಗಳಿಗೆ ವಾಟ್ಸಾಪ್ ಮೂಲಕ ಕಳುಹಿಸುವುದು.

ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ(ಸ್ಕೌ)- 9448914540
ಶ್ರೀಮತಿ ಮಂಜುಳ.ಸಿ, ಎಸ್.ಒ.ಸಿ(ಗೈ)- 9844366941

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ|| ಪಿ.ಜಿ.ಆರ್.ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಗೆ,
ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಕರ್ನಾಟಕ.

**ಪ್ರತಿಯನ್ನು :**

1. **ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ**
2. **ಎ.ಎಸ್.ಒ.ಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿವಿಗಳ ಸೂಕ್ತ ಕ್ರಮಕ್ಕಾಗಿ**